
# ಪ್ರಕೃತಿಯ ವಿಸ್ಮಯ ಲ್ಯೂರೆ ಗುಹೆಗಳು

**ಕಲಾವಿದನೊಬ್ಬನ ಅದ್ಭುತ ಕೈಚಳಕದ ಕೃತಿಗಳಂತೆ ವೀಕ್ಷಕರನ್ನು ವಿಸ್ಮಯಕ್ಕೆ ದೂಡುವ ಈ ಶಿಲ್ಪಸೌಂದರ್ಯ ಎಂದಿಗೂ ಮರೆಯಲಾಗದ ಅನುಭವವವೇ.**

ಚಿತ್ರ– ಲೇಖನ:
**ಎಸ್.ಎಂ. ಜಂಬುಕೇಶ್ವರ**



ಲ್ಯೂರೆ ಗುಹೆಗಳು ಅಮೆರಿಕದ ವರ್ಜೀನಿಯಾ ರಾಜ್ಯದಲ್ಲಿದ್ದು ಮೇರಿಲ್ಯಾಂಡ್‌ನಿಂದ ಅಲ್ಲಿಗೆ ಎರಡು ಗಂಟೆಗಳ ಪ್ರಯಾಣ. ಅಂದರೆ ಸುಮಾರು 150 ಮೈಲಿ. ವಾಷಿಂಗ್‌ಟನ್‌ನಿಂದ 180 ಮೈಲಿ.

ಅಲ್ಲಿಗೆ ತಲುಪಿದಾಗ ಬೆಳಿಗ್ಗೆ 10.30 ಆಗಿತ್ತು. ಆಗಲೇ ನೂರಾರು ಕಾರುಗಳನ್ನು ಅಲ್ಲಿ ಪಾರ್ಕ್ ಮಾಡಿದ್ದರು. ನಾವೂ ಕಾರು ಪಾರ್ಕ್ ಮಾಡಿ ಗುಹೆ ಪ್ರವೇಶಕ್ಕಾಗಿ ಟಿಕೆಟ್ ಪಡೆಯಲು ಸರದಿ ಸಾಲಿನಲ್ಲಿ ನಿಂತುಕೊಂಡೆವು. ಮುಂಭಾಗದಲ್ಲಿ ಅಂತಹ ವಿಶೇಷವಾಗೇನೂ ಕಾಣದ ಚಿಕ್ಕದಾದ ಕಟ್ಟಡ. ಅದು ಚಿಕ್ಕದಾಗಿದ್ದುದರಿಂದ ಟಿಕೆಟ್‌ಕೊಂಡು ನಂತರ ಗುಹೆ ವೀಕ್ಷಿಸಲು ಬೇರೆ ಕಡೆಗೆ ಹೋಗಬೇಕೇನೋ ಅಂದುಕೊಂಡಿದ್ದೆವು. ಆದರೆ ಟಿಕೆಟ್ ಪಡೆದು ಚಿಕ್ಕದಾದ ಗೋಡೆ ದಾಟಿ ಹತ್ತಡಿ ದೂರ ಸಾಗಿದರೆ ಬಾಗಿಲಲ್ಲಿ ಸ್ವಯಂಸೇವಕನೊಬ್ಬ ಟಿಕೆಟ್ ನೋಡಿ ಗುಹೆಯ ಒಳಭಾಗಕ್ಕೆ ಬಿಡುತ್ತಿದ್ದ. ಒಳಗಡೆ ಪ್ರವೇಶ ಮಾಡಿ ಸ್ವಲ್ಪ ನಸುಕತ್ತಲಿನಲ್ಲಿಯೇ ಹತ್ತಿಪ್ಪತ್ತು ಮೆಟ್ಟಿಲು ಇಳಿದು ದಾಟಿ ನಡೆದರೆ ಲ್ಯೂರೆ ಗುಹೆ ತನ್ನ ವಿಶ್ವರೂಪ ದರ್ಶನವನ್ನು ತೋರಿಸಲು ಪ್ರಾರಂಭಿಸುತ್ತದೆ.

1878ರ ಆಗಸ್ಟ್ 13ರಂದು ಆಂಡ್ರ್ಯೂ ಜೆ. ಕ್ಯಾಂಪ್‌ಬೆಲ್ ತನ್ನ ಮೂವರು ಸಂಗಡಿಗರೊಡನೆ ಇಲ್ಲಿ ಗವಿಯೊಂದನ್ನು ಕಂಡುಹಿಡಿದನಂತೆ. ವರ್ಜೀನಿಯಾ ರಾಜ್ಯದ ಲಾರಿಬೆಟ್ಟೆ ತುದಿಯ ಹತ್ತಿರ ಸುಣ್ಣದ ಕಲ್ಲಿನ ಕುಳಿಯೊಂದರಿಂದ ಕುಳಿರ್ಗಾಳಿ ಹೊರಬರುತ್ತಿತ್ತು. ಅದನ್ನು ಮೊದಲು ಗಮನಿಸಿದ್ದು ಕ್ಯಾಂಪ್‌ಬೆಲ್‌ನ 13 ವರ್ಷದ ಸೋದರಳಿಯ ಕ್ವಿಂಟ್. ತನ್ನ ಛಾಯಾಚಿತ್ರ ಸಹಾಯಕ ಬೆಂಟನ್ ಸ್ಟೆಬಿನ್ಸ್ ಜೊತೆಗೆ ಕ್ಯಾಂಪ್‌ಬೆಲ್ ಕುಳಿಯೊಂದನ್ನು ಪರಿಶೀಲಿಸುತ್ತಿದ್ದ. ಸುಮಾರು ನಾಲ್ಕೈದು ಗಂಟೆಗಳ ಪ್ರಯತ್ನದಿಂದಾಗಿ ಅವರು ಅಲ್ಲಿದ್ದ ಒಂದು ಕಲ್ಲುಬಂಡೆಯನ್ನು ಅಗೆದು ಸ್ವಲ್ಪ ಸಡಿಲಮಾಡಿ ಪಕ್ಕಕ್ಕೆ ತಳ್ಳಿದರು. ನಂತರ ಕೈಯಲ್ಲಿ ಹಿಡಿದ ಮೊಂಬತ್ತಿಯ ಬೆಳಕಿನಲ್ಲಿಯೇ ಕ್ಯಾಂಪ್‌ಬೆಲ್ ಮತ್ತು ಕ್ವಿಂಟ್ ಹಗ್ಗದ ಸಹಾಯದಿಂದ ಗವಿಯೊಳಕ್ಕೆ ನಿಧಾನವಾಗಿ ಇಳಿದರು.

ಅಲ್ಲಿ ಮೋಂಬತ್ತಿಯ ಬೆಳಕಲ್ಲಿ ಅವರು ವಿಶಾಲವಾಗಿ ಹರಡಿದ್ದ ಗುಹೆಯನ್ನು ಕಂಡು ಆಶ್ಚರ್ಯಚಕಿತರಾದರು. ಜತೆಗೆ ಅಲ್ಲಿನ ಸೌಂದರ್ಯಕ್ಕೂ ಮನಸೋತರು. ಸುಣ್ಣದ ಕಲ್ಲಿನಿಂದಾದ ತೂಗು ಛಾವಣಿಗಳು ಅದ್ಭುತ ದೃಶ್ಯವನ್ನು ತೋರಿಸುವಂತಿತ್ತು. ಮುಂದೆ ಸುಮಾರು ನೂರಾ ಹತ್ತು ವರ್ಷಗಳ ನಂತರ, ಅಂದರೆ 1987ರಲ್ಲಿ ಈ ಗುಹೆಗಳಿಗೆ ವಿದ್ಯುತ್‌ದೀಪಗಳನ್ನು ಅಳವಡಿಸಲಾಯಿತು.

1974ರಲ್ಲಿ ಈ ಗುಹೆಯನ್ನು ಸ್ಮಾರಕವನ್ನಾಗಿಸಿ ‘ರಾಷ್ಟ್ರೀಯ ಸಂಪತ್ತು’ ಎಂದು ಪರಿಗಣಿಸಲಾಗಿದೆ. ಪೂರ್ವ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿರುವ ಈ ಗುಹೆಗಳು ಪ್ರಪಂಚದ ಅತಿ ವಿಸ್ತಾರವಾದ ಗುಹೆಗಳಲ್ಲಿ ಒಂದು. ಆದರೂ ಇದು ಸರ್ಕಾರದ ಆಡಳಿತಕ್ಕೆ ಒಳಪಡದಿರುವುದು ಆಶ್ಚರ್ಯವೇ ಸರಿ.

ನೂರಾರು ವರ್ಷಗಳ ಕಾಲ ಭಾರೀ ಪ್ರಮಾಣದ ನೀರಿನ ಹರಿವು ಅಲ್ಲಿತ್ತು. ಈಗ ನೀರಿನ ಹರಿವು ನಿಂತಿದ್ದರೂ ಕೇವಲ ನೀರಿನ ತೊಟ್ಟುವಿಕೆ ಮುಂದುವರೆದಂತೆಲ್ಲ ಪ್ರಕೃತಿಯ ಅಲಂಕಾರದ ಶಿಲ್ಪರೂಪದ ಚಿತ್ರಣ ಮುಂದುವರಿಯುತ್ತಾ ಬರುತ್ತಿದೆ. ಈ ವಿಶಿಷ್ಟವಾದ ಗುಹೆಯ ವಾತಾವರಣಕ್ಕೆ ಪ್ರವೇಶಿಸಿದಾಗ ಕ್ಯಾಲ್ಸಿಯಂ ಕಾರ್ಬೊನೇಟ್ ತನ್ನಲ್ಲಿರುವ ಇಂಗಾಲಾಮ್ಲವನ್ನು ಸ್ವಲ್ಪಮಟ್ಟಿಗೆ ಬಿಟ್ಟುಕೊಡುತ್ತದೆ. ಈ ಪ್ರಕ್ರಿಯೆಯಿಂದಾಗಿ ಹರಳು ರೂಪುಗೊಳ್ಳತೊಡಗುತ್ತದೆ. ಆಮೇಲೆ ಕ್ರಮೇಣ ತೂಗು ಛಾವಣಿಗಳಾಗಿ ಮಾರ್ಪಡುತ್ತದೆ. ಅದಾದ

